‘ಬರ್ಡ್ ಮ್ಯಾನ್ ಆಫ್ ಇಂಡಿಯಾ’ ಎಂದೇ ಖ್ಯಾತರಾಗಿದ್ದ ಪಕ್ಷಿ ತಜ್ಞ ಸಲೀಮ್ ಅಲಿಯವರು ಹುಸೇನ್‌ರ ಆಸಕ್ತಿಯನ್ನು ಗಮನಿಸಿ ಅಧ್ಯಯನಕ್ಕೆ ಅವಕಾಶ ನೀಡಿದರು. ಅಂದಿನಿಂದ ಸಲೀಂ ಅಲಿ ಅವರ ಜೊತೆಗೂಡಿ ಬಾನಾಡಿಗಳ ಅಧ್ಯಯನಕ್ಕಾಗಿ ಹಲವು ಕ್ಷೇತ್ರಕಾರ್ಯಗಳನ್ನು ಕೈಗೊಂಡ ಹುಸೇನ್ 1979ರಲ್ಲಿ ಬಿಎನ್‌ಎಚ್‌ಎಸ್ ಕ್ಯುರೇಟರ್ ಆಗಿ ನೇಮಕಗೊಂಡರು, ಸಂಶೋಧನಾ ವಿಭಾಗದ ನಿರ್ದೇಶಕರಾದರು. ಮಲೇಷ್ಯಾದ ವೆಟ್ ಲ್ಯಾಂಡ್ ಬ್ಯೂರೊ ಸೇರಿಕೊಂಡು ಕೆಲಕಾಲ ಬರ್ಡ್ ಲೈಫ್ ಇಂಟರ್ನ್ಯಾಷನಲ್ ಸಂಸ್ಥೆಯ ಉಪ ಮುಖ್ಯಸ್ಥರಾಗಿ



ದುಡಿದರು.

ನಿವೃತ್ತಿಯ ನಂತರ ಕಾರ್ಕಳಕ್ಕೆ ಹಿಂದಿರುಗಿ ಬಂದು ‘ಬಯೋಡೈವರ್ಸಿಟಿ ಇನಿಶಿಯೇಟಿವ್ ಟ್ರಸ್ಟ್’ ಸ್ಥಾಪಿಸಿ, ಕುದುರೆಮುಖ ವಲಯದ ಪಕ್ಷಿಗಳ ಸಂರಕ್ಷಣೆಗೆ ಮುಂದಾದರು. ಕುದುರೆಮುಖ ಕಬ್ಬಿಣದ ಅದಿರು ಕಂಪನಿಯು ಗಣಿಗಾರಿಕೆಯನ್ನು ನಿಲ್ಲಿಸಿ ಜಾಗ ತೆರವು ಮಾಡಿದ ನಂತರ, ಅದು ನಿರ್ಮಿಸಿದ್ದ ಟೌನ್ ಶಿಪ್ ಅನ್ನು ಜೀವವೈವಿಧ್ಯ ಸಂಶೋಧನಾ ಕೇಂದ್ರವನ್ನಾಗಿ ಪರಿವರ್ತಿಸಬೇಕೆಂದು ಕರ್ನಾಟಕ ಸರ್ಕಾರವನ್ನು ಕೇಳಿಕೊಂಡಿದ್ದರು. ದೇಶದ ಪಶ್ಚಿಮ ಹಾಗೂ ಪೂರ್ವ ಘಟ್ಟಗಳ ಪಕ್ಷಿ ಸಂಕುಲದ ಆಳವಾದ ಅಧ್ಯಯನ ಮಾಡಿದ ಹುಸೇನ್ ನಾರ್ಕೊಂಡಂ ಮಂಗಟ್ಟೆ ಹಕ್ಕಿ ಅಧ್ಯಯನಕ್ಕಾಗಿ ಶ್ರೀಲಂಕಾದ ನಾರ್ಕೊಂಡಂ ದೀಪದಲ್ಲಿ ಪ್ರವಾಸ ಅಧ್ಯಯನ ಮಾಡಿದ್ದರು. ಇವರ ಪರಿಸರ ಸಂರಕ್ಷಣಾ ಕೆಲಸವನ್ನು ಗುರುತಿಸಿ ಕುದುರೆಮುಖ ಭಾಗದಲ್ಲಿ ಕಪ್ಪೆಯ ಪ್ರಭೇದವೊಂದಕ್ಕೆ ‘ನಿಕ್ಟಿ ಬತ್ರಾಕಸ್ ಹುಸೇನಿ’ ಎಂದು ಹೆಸರಿಡಲಾಗಿದೆ.

## ಕಲಿದೇವಪುರ ಪೋಲಾರೆಡ್ಡಿ ಜಗನ್ನಾಥ ರೆಡ್ಡಿ

ಸ್ನೇಹಿತರ ವಲಯದಲ್ಲಿ ಕೆ.ಪಿ.ಜೆ.ರೆಡ್ಡಿ ಎಂದೇ ಪ್ರಸಿದ್ಧರಾದ ರೆಡ್ಡಿಯವರ ಜನಿಸಿದ್ದು ಮಧುಗಿರಿ ತಾಲ್ಲೂಕಿನ ಕಲಿದೇವಪುರದಲ್ಲಿ. ಮೈಸೂರು ವಿಶ್ವವಿದ್ಯಾಲಯದಿಂದ ಬಿಎಸ್ಸಿ ಮತ್ತು ಎಂಎಸ್‌ಸಿ ಪದವಿ ಪಡೆದ ರೆಡ್ಡಿಯವರು ರಾಂಚಿಯಲ್ಲಿರುವ ಬಿರ್ಲಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಿಂದ ಪಿಎಚ್.ಡಿ ಪಡೆದರು. ಏರೋಡೈನಮಿಕ್ಸ್, ಹೈಪರ್ಸೋನಿಕ್ ಶಾಕ್ ವೇವ್ಸ್, ಹೈ ಟೆಂಪರೇಚರ್ ಕೆಮಿಕಲ್ ಕೈನೆಟಿಕ್ಸ್ ಅಂಡ್ ಮೆಟೀರಿಯಲ್ಸ್, ಗ್ಯಾಸ್ ಡೈನಮಿಕ್ ಲೇಸರ್ಸ್ ಮತ್ತು ಕ್ವಾಂಟಮ್ ಎಲೆಕ್ಟ್ರಾನಿಕ್ಸ್‌ನಲ್ಲಿ ಅಪಾರ ಪರಿಣತಿ ಗಳಿಸಿರುವ ಕೆಪಿಜೆ ರೆಡ್ಡಿ ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ 28 ವರ್ಷಗಳ ಕಾಲ ಏರೊ ಸ್ಪೇಸ್ ಎಂಜಿನಿಯರಿಂಗ್ ವಿಭಾಗದಲ್ಲಿ ಸುದೀರ್ಘ ಸೇವೆ ಸಲ್ಲಿಸಿದರು. ಹಲವಾರು ತಂತ್ರಜ್ಞಾನಗಳನ್ನು ರೂಪಿಸಿ ಅವುಗಳಿಗೆ ಹಕ್ಕುಸ್ವಾಮ್ಯ ಪಡೆದಿರುವ ರೆಡ್ಡಿ ಅವರು ಭಾರತದಲ್ಲಷ್ಟೇ ಅಲ್ಲ ಜಗತ್ತಿನ ಎಲ್ಲ ರೈತಾಪಿ ಸಮುದಾಯಕ್ಕೆ ನೆರವಾಗುವ ‘ರೆಡ್ಡಿ ಟ್ಯೂಬ್’ ಕಂಡುಹಿಡಿದರು.

ಮೊದಲ ಸಲ ಹೋಟೆಲ್‌ಗೆ ಹೋಗಿ ಉಪ್ಪಿಟ್ಟು, ಕೇಸರಿ ಬಾತ್ ತಿಂದ ನಂತರ ಅದರ ರುಚಿಗೆ ಮನಸೋತು, ಹೋಟೆಲ್‌ನಲ್ಲಿ ವೇಟರ್ ಆಗಿ ಕೆಲಸಕ್ಕೆ ಸೇರಿಕೊಂಡರೆ ದಿನವೂ ತಿನ್ನುವ ಭಾಗ್ಯ ದೊರಕುತ್ತದೆ ಎಂದುಕೊಂಡು ವೇಟರ್ ಆಗಲು ತೀರ್ಮಾನಿಸಿದರು. ಹತ್ತನೇ ತರಗತಿ ಓದುತ್ತಿದ್ದಾಗ ತಮ್ಮ ಸ್ನೇಹಿತನೊಬ್ಬ ಬಸ್ ಕಂಡಕ್ಟರ್ ಆದ ಸುದ್ದಿ ತಿಳಿದು ತಾವು ಸಹ ಕಂಡಕ್ಟರ್ ಆಗಬೇಕೆಂದು ಬಯಸಿದರು. ಪಿಯುಸಿ ಓದುತ್ತಿದ್ದಾಗ ರಾಜಕಾರಣಿಯಾದರೆ ಹಳ್ಳಿಯ ಸಮಸ್ಯೆಗಳನ್ನು ಬಗೆಹರಿಸಬಹುದು ಎಂದು ಆಯ್ಕೆ ಮಾಡಿಕೊಂಡಿದ್ದ ವಿಜ್ಞಾನ ವಿಭಾಗದ ಪಿಯುಸಿಯಲ್ಲಿ ಫೇಲ್ ಆಗಲು ನಿರ್ಧರಿಸಿದರು. ಆದರೆ ಅಣ್ಣನ ಒತ್ತಾಯಕ್ಕೆ ಪರೀಕ್ಷೆ ಬರೆದಿದ್ದರಿಂದ ಶೇ.35 ಅಂಕ ಗಳಿಸಿ ಜಸ್ಟ್ ಪಾಸಾಗಿದ್ದರು. ನಂತರ ಬಿಎಸ್ಸಿಯಲ್ಲಿ ಭೌತವಿಜ್ಞಾನದಲ್ಲಿ ನೂರಕ್ಕೆ ನೂರು ಅಂಕ ಗಳಿಸಿದ್ದರು.




### ಎಂ.ಆರ್. ಮಹದೇವಪ್ಪ

‘ರೈಸ್ ಮಹದೇವಪ್ಪ’ ಎಂದೇ ಖ್ಯಾತರಾಗಿದ್ದ ಮಾದಪ್ಪ ಮಹದೇವಪ್ಪ ಚಾಮರಾಜನಗರ ಜಿಲ್ಲೆಯ ಮಾದಾಪುರದಲ್ಲಿ ಜನಿಸಿದ್ದರು. ಭಾರತೀಯ ಕೃಷಿ ವಿಜ್ಞಾನದಲ್ಲಿ ಅಪಾರ ಜ್ಞಾನ ಸಂಪಾದಿಸಿದ ಅವರು ಮೈಸೂರಿನ ಶಾರದಾ ವಿಲಾಸ್ ಕಾಲೇಜು ಮತ್ತು ಬೆಂಗಳೂರಿನ ಕೃಷಿ ವಿಶ್ವವಿದ್ಯಾಲಯದಲ್ಲಿ ಪದವಿ ಗಳಿಸಿದರು. ಅತಿ ಹೆಚ್ಚು ಇಳುವರಿ ನೀಡುವ ಹೈಬ್ರಿಡ್ ಅಕ್ಕಿ ತಳಿಗಳನ್ನು ನಾಡಿಗೆ ಪರಿಚಯಿಸಿದ ಕೀರ್ತಿ ಇವರದು. ಧಾರವಾಡ ಕೃಷಿ ವಿಶ್ವವಿದ್ಯಾಲಯದ ಉಪಕುಲಪತಿಯಾಗಿ ಸೇವೆ ಸಲ್ಲಿಸಿ, ಪಾರ್ಥೇನಿಯಂ ಕಳೆ ನಿಯಂತ್ರಣಕ್ಕೆ ಸುಲಭ ಪರಿಹಾರ ಕಂಡು ಹಿಡಿದಿದ್ದರು. ನಿವೃತ್ತಿಯ ನಂತರ ಜೆಎಸ್‌ಎಸ್ ಮಹಾವಿದ್ಯಾಪೀಠದ ರೂರಲ್ ದೇವ್ ಎಂಬ ಸರ್ಕಾರೇತರ ಸಂಸ್ಥೆಯ ನಿರ್ದೇಶಕರಾಗಿ, 28 ಜಿಲ್ಲೆಗಳ 500 ಹಳ್ಳಿಗಳಲ್ಲಿ ‘ಸೀಡ್ ವಿಲೇಜ್’ ಎಂಬ ಕಾರ್ಯಕ್ರಮ ರೂಪಿಸಿದರು. ಮಹದೇವಪ್ಪನವರಿಗೆ ಭಾರತ ಸರ್ಕಾರ ಪದ್ಮಶ್ರೀ ಪುರಸ್ಕಾರ ನೀಡಿ ಗೌರವಿಸಿದೆ.

ಪ್ರತಿರೋಧ ತೋರುವುದಿಲ್ಲ. ಲೋಹಗಳ ಈ ಗುಣವನ್ನು ಸೂಪರ್ ಕಂಡಕ್ಟಿವಿಟಿ ಎನ್ನುತ್ತಾರೆ. ಇಂಗಾಲದ ನ್ಯಾನೊ ನಳಿಕೆಗಳನ್ನು ಬಳಸಿಕೊಂಡು ನೀರಿನಿಂದ ವಿದ್ಯುತ್ ಉತ್ಪಾದನೆಯ ವಿಧಾನವನ್ನು ರೂಪಿಸಿದ ನಾಗೇಶ್ ಜಗತ್ತಿನ ಅತ್ಯುತ್ತಮ ವಿಜ್ಞಾನಿಗಳ ಸಾಲಿಗೆ ಸೇರಿದರು.

1800ಕ್ಕೂ ಹೆಚ್ಚು ಸಂಶೋಧನಾ ಪ್ರಬಂಧಗಳನ್ನು ಪ್ರಕಟಿಸಿರುವ ರಾವ್ ಅವರಿಗೆ 85ಕ್ಕೂ ಹೆಚ್ಚು ವಿಶ್ವವಿದ್ಯಾಲಯಗಳು ಗೌರವ ಡಾಕ್ಟರೇಟ್ ನೀಡಿ ಗೌರವಿಸಿವೆ. ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ ಮುಖ್ಯಸ್ಥರಾಗಿ ಅವರು ಮಾಡಿದ ಸೇವೆ ಅನನ್ಯವಾದುದು. ಪ್ರಧಾನಿಗಳಾದ



ಇಂದಿರಾ ಗಾಂಧಿ ಮತ್ತು ರಾಜೀವ್ ಗಾಂಧಿಯವರ ಅವಧಿಯಲ್ಲಿ ದೇಶದ ವೈಜ್ಞಾನಿಕ ಕ್ಷೇತ್ರದ ಬೆಳವಣಿಗೆಗೆ ನಾಯಕತ್ವ ವಹಿಸಿದ್ದ ಕೀರ್ತಿ ಇವರದು. ಶಾಂತಿ ಸ್ವರೂಪ್ ಭಟ್ನಾಗರ್ ಬಹುಮಾನ, ಕರ್ನಾಟಕ ರತ್ನ, ಪದ್ಮ ವಿಭೂಷಣ, ಪದ್ಮಶ್ರೀ ಪ್ರಶಸ್ತಿಗಳಲ್ಲದೆ ಭಾರತ ಸರ್ಕಾರದ ಅತ್ಯುನ್ನತ ಗೌರವವಾದ ‘ಭಾರತರತ್ನ’ (2014) ಇವರ ಮುಡಿಗೇರಿದೆ. ಬ್ರೆಜಿಲ್, ಫ್ರಾನ್ಸ್, ರಷ್ಯಾ ಮತ್ತು ಜಪಾನ್ ದೇಶಗಳು ತಮ್ಮ ದೇಶದ ಅತ್ಯುನ್ನತ ನಾಗರಿಕ ಗೌರವಗಳನ್ನು ನೀಡಿವೆ. 90ರ ಹರಯದ ಸಿ.ಎನ್.ಆರ್. ರಾವ್ ಇಂದಿಗೂ ಚೈತನ್ಯದ ಚಿಲುಮೆಯಂತಿದ್ದಾರೆ.